


### ಎಡದಿಂದ ಬಲಕ್ಕೆ

1. ಅಂಥ ಅಲಂಕಾರ–ಈ ಲೋಕದ್ದಂತೂ ಅಲ್ಲ ಬಿಡಿ (4)
3. ಆ ಮರದ ನೆರಳಲ್ಲಿ ನೆಮ್ಮದಿ ಖಂಡಿತ (3)
4. ಮೇಣದಮನೆ ಕಟ್ಟಿದ್ದು ಆಕೆಯ ಗಂಡ (3)
6. ಪಕ್ಷಿ ವಿವರಗಳ ಪುಟ್ಟ ಪುಸ್ತಕವನ್ನು ರಕ್ಷಿಸುವ ಹಾಳೆ (4)
7. ಆದರಿಸಲು ತಕ್ಕವಳು – ವಸಿಷ್ಠರ ಪತ್ನಿ( 4)
8. ಆಹಾರ ನಾಶ ತಪ್ಪಿಸುವ ಕೆಲಸ ಹಗಲೂ ಇರುಳು (4)
10 ಸಂಶಯದ ಸುಳಿವೂ ಇಲ್ಲ – 'ಒಳ್ಳೆಯ ಹಾರೈಕೆ' (4)
12. ತೇರಿನ ಮೇಲೆ ಪ್ರಸಿದ್ಧ 'ಪವಿತ್ರ ಬೆಟ್ಟ' (4)
14. ಅಧಿಕಾರ ಹೋದೊಡನೆ ಗಾಢ ಕತ್ತಲು (4)
16. ಆ ಬಸ್ಸಿನ ಪಯಣ – ಒಳ್ಳೆ ಅದೃಷ್ಟ (3)
17. ಹಸಿರು ಎಲ್ಲೆಡೆ ಹಬ್ಬಲಿ ಎಂದು ಆಶೀರ್ವದಿಸು (3)
18. ಸಸಿ ರಾಶಿಯಲ್ಲಿ ಜೊತೆಯಾಗಿದೆ 'ನೀರಲ್ಲಿ ಬೆಳೆವ ಗಿಡ' (4)

### ಮೇಲಿಂದ ಕೆಳಕ್ಕೆ

1. ಅರಸನ ಮನೆಯ ಕೆಲಸ, ಶಾಶ್ವತ (3)
2. ಕೊಟ್ಟವರ ಕೈಯಲ್ಲಿ ತೆಂಗಿನ ಚಿಪ್ಪು (3)
3. ರಾಧಾಕೃಷ್ಣರನ್ನು ಪೂಜಿಸುತ್ತಾನೆ ಆತ (4)
5. ಹೂರಣ ಕಳವು– ತಲೆಕಗು (3)
7.ಆಸೆಯನ್ನು ದೂರ ಮಾಡುವುದೆಂದರೆ ಆತನಿಗೆ ಶ್ರಮವೇ ಇಲ್ಲ (4)
9. ಭಲಾ,ಭಲಾ! ಕಲ್ಲಿನಲ್ಲಿ ಎಂಥಾ ಹುಡುಗಿ !(4)
11. ಮಾಸಾಶನ ನೀಡಿದ್ದಕ್ಕೆ ಕಷ್ಟ ಪರಿಹಾರ (3)
13. 'ಆಕಳಿನ ಮರಿಯ ನೆಲೆ"– ನಮ್ಮ ಕರ್ನಾಟಕ (4)
14. ಅವನ ಭುಜದ ಮೇಲೆ ತಾವರೆ ಹೇಗೆ? (3)
15.ಪರಿಹರಿಸಲಾಗಲಿಲ್ಲ ಗುಟ್ಟು (3)

### ಪದಬಂಧ 22-3-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅನಾದರ; 3. ನಿರಭ್ರ; 4. ಹಿರಿದು; 6. ಕರ್ಣಾಮೃತ; 7. ಅಂತಕ; 9. ಹರಿತ; 11. ಕೆಳಗೆ; 13. ವಿದಾಯ; 15. ಪರ್ಣಶಾಲೆ; 17. ವಿಷಾದ; 18. ಕ್ಕಿಳ್ಳಬೆ (ಬೆಳ್ಳಕ್ಕಿ ಹಿಂದು ಮುಂದು); 19. ಕರಿನಾಗ.

**ಮೇಲಿಂದ ಕಳಕ್ಕೆ:**

1. ಅಭ್ರಕ; 2. ರಹಿತ; 3. ನಿರ್ವಾತ; 5. ದುಬಾರಿ; 7. ಅಂಜಿಕೆ; 8. ಕಠ್ರಗೆ; 9. ಹರವಿ; 10 ತನಯ; 12. 'ಆರವಿ' (ವಿರಳ ತಲೆಕೆಳಗು); 14. ದಾಳಿಂಬೆ; 15. ಪದಕ; 16. ಲೆಕ್ಕಿಗ.

## ಪ್ರಾಣಿ ಪ್ರಪಂಚ

# 'ಜಾಗ್ವಾರ್'-ಅದೇನು?

ಜಾಗ್ವಾರ್–ಅದೊಂದು 'ಬೆಕ್ಕು'. ಅದರ ವೈಜ್ಞಾನಿಕ ಹೆಸರು ಪ್ಯಾಂಥೆರಾ ಓಂಕಾ'. ಪ್ರಸ್ತುತ ಧರೆಯಲ್ಲಿರುವ ಒಟ್ಟು ಮೂವತ್ತೇಳು ವಿಧದ ಬೆಕ್ಕುಗಳಲ್ಲಿ ದೈತ್ಯ ಗಾತ್ರದಲ್ಲಿ ಸಿಂಹ, ಹುಲಿ ನಂತರದ ಮೂರನೆಯ ಸ್ಥಾನ ಜಾಗ್ವಾರ್‌ನದು. ಬಾಹ್ಯರೂಪದಲ್ಲಿ ಜಾಗ್ವಾರ್ ಬಹುಮಟ್ಟಿಗೆ ಚಿರತೆಯನ್ನೇ(ಲೆಪರ್ಡ್) ಹೋಲುತ್ತದೆ. ಅದರದು ದಷ್ಟಪುಷ್ಟ ಶರೀರ. ಸಿಂಹ ಅಥವಾ ಹುಲಿಯನ್ನು ಹೋಲುವ ತಲೆಬುರುಡೆ. ಮೈಯನ್ನು ಆವರಿಸಿದ ಕಂದು–ಹಳದಿ ಮಿಶ್ರಿತ ವರ್ಣದ ಚರ್ಮ. ಅದರ ಮೇಲೆಲ್ಲ ಕಪ್ಪು ಮಚ್ಚೆಗಳು ಒಟ್ಟಾರೆ ತುಂಬ ರುದ್ರ ಸುಂದರ ರೂಪ. ನೇರ ನೋಡಿದೊಡನೆ ಬೆಚ್ಚಿಸುವ ಬೆರಗಾಗಿಸುವ ಸ್ವರೂಪ. ಸಂಪೂರ್ಣ ಕಪ್ಪು ಬಣ್ಣದ ಜಾಗ್ವಾರ್‌ಗಳೂ ಇವೆ. ಅವುಗಳದು ಬೇರೆ ಪ್ರಭೇದವೇನಲ್ಲ. ಸೂಕ್ಷ್ಮವಾಗಿ ಸಮೀಪದಿಂದ ಗಮನಿಸಿದರೆ ಅವುಗಳ ಚರ್ಮ ಚಿತ್ತಾರ ಗೋಚರ.

ಜಾಗ್ವಾರ್‌ಗಳ ನೈಸರ್ಗಿಕ ವಾಸಕ್ಷೇತ್ರ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳಿಗಷ್ಟೇ ಸೀಮಿತ. ಮೆಕ್ಸಿಕೊದಿಂದ ಅರ್ಜಂಟೈನಾವರೆಗೆ ಅವುಗಳ ನೆಲೆ ಹರಡಿದೆ. ಈ ಇಡೀ ಪ್ರದೇಶದಲ್ಲಿ ಜಾಗ್ವಾರ್‌ಗಳಷ್ಟು ದೊಡ್ಡ ಬೆಕ್ಕು ಇನ್ನಾವುದೂ ಇಲ್ಲ. ಬ್ರೆಜಿಲ್‌ನ ಅತಿ ವಿಶಾಲ ಜೌಗು ಪ್ರದೇಶ 'ಪ್ಯಾಂನಾಲ್' ನಲ್ಲಿ ಜಾಗ್ವಾರ್‌ಗಳದು ಗರಿಷ್ಠ ಸಂಖ್ಯೆ.



ಜಾಗ್ವಾರ್ ತುಂಬ ಚುರುಕಿನ ಬಹು ಬಲಿಷ್ಠ ಬೇಟೆಗಾರ. ಏಳಡಿ ಉದ್ದ, ನೂರೈವತ್ತು ಕಿಲೋ ತೂಕ ಮುಟ್ಟುವ ಜಾಗ್ವಾರ್ ಮಧ್ಯ ಅಮೆರಿಕದ ಅಮೆಜೋನಿಯಾ ವೃಷ್ಟಿವನದ ಪ್ರಧಾನ ಬೇಟೆಗಾರ. ಜಾಗ್ವಾರ್‌ನ ದವಡೆ ಮತ್ತು ಕೋರೆ ಹಲ್ಲುಗಳ ಶಕ್ತಿ ವಿಪರೀತ. ಆದ್ದರಿಂದಲೇ ಇತರ ಎಲ್ಲ ದೊಡ್ಡ ಬೆಕ್ಕುಗಳೂ ಬಲಿಪ್ರಾಣಿಯ ಗಂಟಲನ್ನು ಕಚ್ಚಿ ಉಸಿರುಗಟ್ಟಿಸಿ ಸಾಯಿಸಿದರೆ ಜಾಗ್ವಾರ್ ಮಾತ್ರ ಬಲಿಯ ತಲೆ ಬುರುಡೆಯನ್ನು ಕಚ್ಚಿ ಸೀಳಿ ಪ್ರಾಣ ತೆಗೆಯುತ್ತದೆ. ಜಾಗ್ವಾರ್ ವೃಕ್ಷಗಳನ್ನೂ ಏರಬಲ್ಲದು. ಅದು ನಿಷ್ಣಾತ ಈಜುಗಾರ ಕೂಡ. ಜಾಗ್ವಾರ್ ಭಾರೀ ಗಾತ್ರದ ಬಲಾಢ್ಯ ಪ್ರಾಣಿಗಳನ್ನು ಬೇಟೆಯಾಡುತ್ತದೆ. ಉಗ್ರ ಮೊಸಳೆ 'ಕೇಮ್ಯಾನ್', ಅತಿ ಬೃಹತ್ ಸರ್ಪ 'ಅನಕೊಂಡಾ' ಅಂತಹವೂ ಜಾಗ್ವಾರ್‌ಗೆ ಆಹಾರವಾಗುತ್ತದೆ.

ಸಂತಾನವರ್ಧನಾ ಕಾಲದಲ್ಲಿ ಬಿಟ್ಟು ಇನ್ನೆಲ್ಲ ದಿನಗಳಲ್ಲೂ ಜಾಗ್ವಾರ್‌ಗಳು ಒಂಟಿಯಾಗಿ ಬದುಕುತ್ತವೆ. ಜಾಗ್ವಾರ್‌ಗಳಿಗೆ ನೈಸರ್ಗಿಕ ಶತ್ರುಗಳು ಇಲ್ಲವೇ ಇಲ್ಲ ಎನ್ನಬಹುದಾದಷ್ಟು ವಿರಳ. ಆದರೇನು? ಸುಂದರ ಚಿತ್ತಾರದ ಅವುಗಳ ಚರ್ಮಕ್ಕಾಗಿ ನಡೆಯುತ್ತಿರುವ ಮನುಷ್ಯರ ಕಳ್ಳಬೇಟೆಯಿಂದಾಗಿ ಜಾಗ್ವಾರ್‌ಗಳು ಅಲ್ಪ ಸಂಖ್ಯಾತರಾಗಿವೆ; ಅಳಿವ ಹಾದಿ ಹಿಡಿದಿವೆ.

■ ಎನ್. ವಾಸುದೇವ್